ಮಾಡಲಾಗಿತ್ತು. ಈಗ ನೋಡಿದರೆ ಅದರ ಕುರುಹುಗಳು ರಸ್ತೆಗೆ ಎದುರಾಗಿದ್ದ ಉತ್ತರ ಭಾಗದಲ್ಲಿ ಮಾತ್ರ ಉಳಿದಿದ್ದವು. ಇಸ್ತಿರಿ ಅಪ್ಪಣ್ಣ ಜೈಲು ಸೇರುವ ಮುನ್ನ ಈ ಸ್ಥಳಕ್ಕೆ ಆಗಿನ ಮಣ್ಣಿನ ರಸ್ತೆಗೆ ಎದುರಾಗಿ ದಣಪೆಯೊಂದಿತ್ತು. ಈಗ ಅದು ಕಾಲದಲ್ಲಿ ಕರಗಿ ಹೋಗಿತ್ತು. ಉಳಿದ ಮೂರು ಭಾಗಗಳಲ್ಲಿ ಮನೆ ಕಟ್ಟಿಕೊಂಡಿದ್ದ ಉಳ್ಳವರು ನಾಲ್ಕು ನಾಲ್ಕು ಅಡಿ ಒತ್ತುವರಿ ಮಾಡಿ ತಮ್ಮ ಕಂಪೌಂಡ್ ಗೋಡೆಗಳನ್ನು ಎಬ್ಬಿಸಿದ್ದರು. ಈಗ ಉಳಿದ ಅರ್ಧಕ್ಕರ್ಧ ಜಾಗದಲ್ಲಿ ಮೊದಲು ಅಪ್ಪಣ್ಣನ ಗುಡಿಸಲು ಇದ್ದ ಜಾಗದಲ್ಲಿ ಮಾಡು, ಗೋಡೆಗಳೆಲ್ಲ ಕುಸಿದು ಎರಡಡಿ, ಮೂರಡಿ ಮಣ್ಣಿನ ಗೋಡೆಗಳು ಉಳಿದು ಗುಡಿಸಲು ಇದ್ದ ಜಾಗಕ್ಕೆ ಸಾಕ್ಷಿಗಳಾಗಿ ನಿಂತಿದ್ದವು. ಗುಡಿಸಲಿನ ನಿವೇಶನದ ಒಳಗೂ, ಹೊರಗೂ ಆಳೆತ್ತರದ ಹುಲ್ಲು, ಕಮ್ಯುನಿಸ್ಟ್ ಗಿಡಗಳು, ಇತರ ಗಿಡಗಂಟಿಗಳು ಬೆಳೆದು ಆ ನಿವೇಶನಕ್ಕೆ ರಕ್ಷೆಯಾಗಿ ನಿಂತಿದ್ದವು.

ಇಸ್ತಿರಿ ಅಪ್ಪಣ್ಣನ ಹೆಂಡತಿ ಉಮಿಲು ಅವಳ ತವರುಮನೆಗೆ ಹೋಗಿದ್ದಳು. ಅವನು ಜೈಲಿನಲ್ಲಿರುವುದು ಕಾಯಂ ಎಂದಾದ ಮೇಲೆ ಅವಳು ಒಮ್ಮೆ ಜೈಲಿಗೆ ಬಂದು ಅವನಿಗೆ ಹೇಳಿಯೇ ಹೋಗಿದ್ದಳು. ಆಮೇಲೆ ಮಾತ್ರ ಅವಳು ಒಮ್ಮೆಯೂ ಅವನನ್ನು ನೋಡಲು ಬಂದಿರಲಿಲ್ಲ. ಮನೆಯಲ್ಲಿ ಅಷ್ಟು ವರ್ಷಗಳ ಕಾಲ ಯಾರೂ ಇರದ ಕಾರಣ ಅದು ಹಾಗೆ ಪಾಳು ಬಿದ್ದಿತ್ತು.

ಎಲ್ಲರಿಗೂ ಆಸೆ ಹುಟ್ಟಿಸುವಂತಹ ಲೊಕೇಶನ್ನಿನಲ್ಲಿದ್ದ ಈ ನಿವೇಶನವನ್ನು ತಮ್ಮದಾಗಿಸಿಕೊಳ್ಳಲು ಬೆಳೆಯುತ್ತಿದ್ದ ಪಟ್ಟಣದಲ್ಲಿ ಹಲವರು ಮನಸ್ಸು ಮಾಡಿದ್ದಿತ್ತು. ಆದರೆ ರೆಕಾರ್ಡುಗಳನ್ನು ತಿದ್ದಿ ಜಾಗವನ್ನು ವಶಪಡಿಸಿಕೊಳ್ಳಲು ಸ್ವಲ್ಪ ಪ್ರಯತ್ನ ಮಾಡಿದ್ದವರೆಲ್ಲರಿದೂ ಕೊನೆಯ ಗಳಿಗೆಯಲ್ಲಿ ಹಿಂದೆ ಸರಿಯಲು ಒಂದು ಬಲವಾದ ಕಾರಣವಿತ್ತು.

ಇಸ್ತಿರಿ ಅಪ್ಪಣ್ಣ ಜೈಲಿನಲ್ಲಿದ್ದ ಎನ್ನುವುದೇ ಆ ಕಾರಣ. ಜಾಗವನ್ನು ಒಳಗೆ ಹಾಕಿಕೊಳ್ಳಲು ರೆಕಾರ್ಡ್ ತಿದ್ದುವ ಹಂಚಿಕೆಯೊಂದಿಗೆ ಬರುವವರ ಬಳಿ ಯಾರಾದರೂ ಈ ಪ್ರಶ್ನೆಗಳನ್ನು ಎತ್ತುತ್ತಿದ್ದರು. ಅಪ್ಪಣ್ಣನ ಅಡ್ರೆಸ್ ಪೊಲೀಸರ ಬಳಿ ಇದೆಯಲ್ಲ? ಅವರೇನಾದರೂ ಅವನನ್ನು ಜೈಲಿನಿಂದ ಬಿಟ್ಟು ಇಲ್ಲಿಗೆ ತಂದುಬಿಟ್ಟರೆ ನೀವು ಪೊಲೀಸರಿಗೆ ಏನು ಉತ್ತರ ಹೇಳುತ್ತೀರಿ? ಅವನ ಮನೆಯ ಜಾಗವನ್ನು ನಿಮಗೆ ಮಾರಿದವರು ಯಾರು? ಎಂದೆಲ್ಲ ಕೇಳಿ, ಆಮೇಲೆ ನೀವು ಸಿಕ್ಕಿ ಹಾಕಿಕೊಂಡರೆ ಅವನ ಬದಲಿಗೆ ನೀವು ಒಳಗೆ ಕುಳಿತುಕೊಳ್ಳಬೇಕಾದೀತು. ಈ ಜಾಗದ ಆಸೆ ಬಿಡಿ. ಅಲ್ಲದೆ ಇದೇನೂ ಒಳ್ಳೆಯ ಲಕ್ಷಣದ ಜಾಗ ಆಗಿರಲಿಕ್ಕಿಲ್ಲ. ವಾಸ್ತು ದೋಷ ಇದ್ದೀತು. ಇಲ್ಲದಿದ್ದರೆ ಇದರ ಯಜಮಾನ ಜೈಲಿಗೆ ಹೋಗಿ ಅಲ್ಲಿ ಕೊಳೆಯುತ್ತಿದ್ದನೇ?

ಈಗ ಅಪ್ಪಣ್ಣನನ್ನು ಬಿಡಿಸಿಕೊಂಡು ಅವನ ಮನೆಯಿದ್ದ ಜಾಗದ ಎದುರು ಬಂದು ನಿಂತ ರಮಾನಂದ ಸರಳಾಯರಿಗೆ, 'ಅಪ್ಪಣ್ಣನನ್ನು ಎಲ್ಲಿಗೆ ಕಳುಹಿಸುವುದು? ಅವನು ಇಲ್ಲಿ ಇರುವುದು ಹೇಗೆ' ಎನ್ನುವ ಸಮಸ್ಯೆ ಎದುರಾಯಿತು. ಅಪ್ಪಣ್ಣನ ಇಸ್ತ್ರಿ ಗಾಡಿಯನ್ನು ಅವನ ಮನೆಯಿದ್ದ ಜಾಗದವರೆಗೆ ತಂದಿರಿಸುವ ವ್ಯವಸ್ಥೆಯನ್ನು ಅವರ ಗೆಳೆಯರು ಮಾಡಿದ್ದರು.

'ಅಪ್ಪಣ್ಣ, ನೀವು ಇದೇ ಊರಲ್ಲಿ ಇಸ್ತ್ರಿ ಹಾಕುವ ಕೆಲಸ ಮಾಡಿಕೊಂಡು ಇರುತ್ತೀರಾ ಹೇಗೆ?' ಎಂದು ಸರಳಾಯರು ಕೇಳಿದರು.

ತನ್ನ ಮನೆಯಿದ್ದ ಜಾಗವನ್ನೇ ಶೂನ್ಯ ದೃಷ್ಟಿಯಿಂದ ನೋಡಿಕೊಂಡಿದ್ದ ಅಪ್ಪಣ್ಣ ಅವರತ್ತ ತಿರುಗಿ, 'ಹಾಂ?' ಅಂದ. ಅದು ಉತ್ತರದ ಹಾಗೆ ಇರಲಿಲ್ಲ. 'ನಾನೇನು ಮಾಡಬೇಕು?' ಎಂದು ಅವರನ್ನೇ ಕೇಳಿದ ಹಾಗಿತ್ತು.

ಸರಳಾಯರ ಮಿತ್ರರು ತಮ್ಮೊಳಗೆ, 'ಈ ಸರಳಾಯರಿಗೆ ಇದು ಬೇಕಿತ್ತಾ? ಅವನು ಅಲ್ಲಿಯೇ ಜೈಲಿನಲ್ಲಿ ಸುಖವಾಗಿದ್ದ!' ಎಂದು ಮಾತಾಡಿಕೊಂಡು ನಕ್ಕರು.

ಸರಳಾಯರಿಗೂ ಏನು ಮಾಡುವುದೆಂದು ಹೊಳೆಯಲಿಲ್ಲ.

'ನಿಮ್ಮ ಹೆಂಡತಿ ಎಲ್ಲಿಯವಳು? ಈಗ ಅವರ ಮನೆಗೆ ಹೋಗಿ ಆಯ್ತಾ? ಮತ್ತೆ ಯೋಚನೆ ಮಾಡಬಹುದಲ್ವಾ ಅಪ್ಪಣ್ಣ? ಈಗ ನಿಮಗೆ ಯಾವ ನಿರ್ಧಾರಕ್ಕೂ ಬರಲಿಕ್ಕೆ ಆಗಲಿಕ್ಕಿಲ್ಲ' ಎಂದು ತಾವೇ ಒಂದು ಪರಿಹಾರವನ್ನು ಸೂಚಿಸಿದರು.

'ಹಾಂ. ಬಾಳ ....ಅವಳ ಊರು' ಎಂದ ಅಪ್ಪಣ್ಣ.